**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 855/2025** **CW-1 PW-1**

**ಸಾಕ್ಷಿಯನ್ನು ದಿಃ 22.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಮಲ್ಲಪ್ಪ ಸಂಗಪ್ಪ ಕುಂಬಾರ |
| ತಂದೆಯ ಹೆಸರುಃ | ಸಂಗಪ್ಪ ವಿ ಕುಂಬಾರ |
| ವಯಸ್ಸುಃ | 29 ವರ್ಷ |
| ವೃತ್ತಿಃ | ಪಿ ಎಸ್ ಐ , ಚನ್ನರಾಯಪಟ್ಟಣದ ನಗರ ಪೋ ಠಾಣೆ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 26.08.2024 ರಿಂದ ನಾನು ಚನ್ನರಾಯಪಟ್ಟಣ ನಗರ ಪೋ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 08.06.2025 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಠಾಣೆಯಲ್ಲಿದ್ದಾಗ ಭಾತ್ಮೀಧಾರರು ಕರೆ ಮಾಡಿ ಬಿ ಎಂ ರಸ್ತೆಯಲ್ಲಿರುವ ನಮ್ಮ ಡಾಬಾದ ಮುಂದೆ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ದಾಸ್ತಾನು ಮಾಡಿಕೊಂಡು ಅಂಗಡಿಗೆ ಹೋಗಿ ಬರುವವರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಚಾಸಾ-7 ರವರಿಗೆ ವರದಿಯನ್ನು ನೀಡಿದ್ದು, ಅದರಂತೆ ರಾತ್ರಿ 10.45 ರ ಸಮಯದಲ್ಲಿ ಚಾಸಾ-7 ರವರು ಪ್ರ ವ ವರದಿಯನ್ನು ತಯಾರಿಸಿರುತ್ತಾರೆ.

ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ-2 ಮತ್ತು ಚಾಸಾ-3, ಪಂಚರಾದ ಚಾಸಾ-4 ಮತ್ತು ಚಾಸಾ-5 ರವರನ್ನು ಠಾಣೆಗೆ ಕರೆಸಿಕೊಂಡು ನನಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಿಗೆ ಪಂಚರಾಗುವಂತೆ ಕೋರಿ ನೋಟೀಸ್ ನೀಡಿರುತ್ತೇನೆ.

ಸಾಕ್ಷಿ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಂತರ ರಾತ್ರಿ 11.30 ಕ್ಕೆ ನಾನು ಚಾಸಾ-2 ರಿಂದ ಚಾಸಾ-5 ರವರು ಠಾಣೆಯನ್ನು ಬಿಟ್ಟು ರಾತ್ರಿ 11.45 ಕ್ಕೆ ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ, ಅಲ್ಲಿ ಒಬ್ಬ ವ್ಯಕ್ತಿ ನಮ್ಮ ಡಾಬಾದ ಬಳಿ ಒಂದು ಬಿಳಿ ಬಟ್ಟೆ ಬ್ಯಾಗನ್ನು ಇಟ್ಟುಕೊಂಡು ನಮ್ಮನ್ನು ನೋಡಿ ಒಬ್ಬ ಸಾರ್ವಜನಿಕ ಓಡಿ ಹೋಗಿದ್ದು, ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆತನ ಹೆಸರು ಬಾಲಕೃಷ್ಣ ಬಿನ್ ಚಿಕ್ಕೇಗೌಡ, ಕಮರವಳ್ಳಿ ಗ್ರಾಮದವರು ಎಂದು ತಿಳಿಸಿರುತ್ತಾರೆ. ಅಲ್ಲಿ ಇದ್ದ ಬಿಳಿ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಒಟ್ಟು 16 ಮದ್ಯ ತುಂಬಿದ ಪ್ಯಾಕೇಟ್ ಗಳು ಇದ್ದು, ಅದರಲ್ಲಿ 180 ಮಿಲಿಯ ಓಲ್ಡ್ ಮಾಂಕ್ XXX ರಮ್ ನ 3 ಮದ್ಯದ ಟೆಟ್ರಾಪ್ಯಾಕ್ ಗಳು, 180 ಮಿಲಿಯ 8 ಪಿ ಎಂ ನ 3 ಮದ್ಯದ ಟೆಟ್ರಾಪ್ಯಾಕ್ ಗಳು, 180 ಮಿಲಿಯ ಓಲ್ಡ್ ಟವರಿನ್ ವಿಸ್ಕಿ ಯ 3 ಮದ್ಯದ ಟೆಟ್ರಾಪ್ಯಾಕ್ ಗಳು ಮತ್ತು 180 ಮಿಲಿಯ ಬ್ಯಾಗ್ ಪೈಪರ್ ವಿಸ್ಕಿಯ 5 ಮದ್ಯದ ಟೆಟ್ರಾಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಎಲ್ಲಾ ಟೆಟ್ರಾಪ್ಯಾಕ್ ಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ಬಾಯಿಯನ್ನು ದಾರದಿಂದ ಕಟ್ಟಿ ಅರಗಿನಿಂದ ಇಲಾಖಾ ಸೀಲಾದ ಓ ಎಂಬ ಅಕ್ಷರದಿಂದ ಪಂಚರ ಸಮಕ್ಷಮ ಸೀಲು ಮಾಡಲಾಯಿತು. ಪಂಚರ ಸಹಿಗಳನ್ನು ಪೇಪರ್ ಗಳಲ್ಲಿ ಪಡೆದು ಎಲ್ಲಾ ಬಿಳಿ ಚೀಲದ ಮೇಲೆ ಅಂಟಿಸಲಾಯಿತು. ಸದರಿ ಮಹಜರ್ ಕ್ರಮವನ್ನು ರಾತ್ರಿ 11.45 ರಿಂದ ಮರುದಿನ ಬೆಳಗಿನ ಜಾವ 1.45 ರವರೆಗೆ ಮಾಡಲಾಯಿತು. ನಂತರ ಅಮಾನತ್ತುಪಡಿಸಿಕೊಂಡ ಎಲ್ಲಾ ಟೆಟ್ರಾಪ್ಯಾಕ್ ಗಳನ್ನು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿ ಚಾಸಾ-7 ರವರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿ ಸ್ಥಳ ಮತ್ತು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ಅಮಾನತ್ತುಪಡಿಸಿಕೊಂಡ ಒಟ್ಟು 16 ಟೆಟ್ರಾಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ –1 ರಿಂದ 16 ಎಂದು, ಸಹಿಗಳನ್ನು ಮು ಮಾ –1(ಎ) ಯಿಂದ 16(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಬಿಳಿ ಚೀಲವನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ –17 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಬಿ ಸಿ ಎಂ ವಕೀಲರಿಂದ ಃ**

ಮಾಹಿತಿ ಬಂದ ನಂತರ ನಾನು ಮೇಲಾಧಿಕಾರಿಗಳಿಗೆ ತಿಳಿಸಿಲ್ಲ. ಪಂಚರನ್ನು ನಾನೇ ಠಾಣೆಗೆ ಕರೆಸಿರುತ್ತೇನೆ. ಚನ್ನರಾಯಪಟ್ಟಣದ ಬಿ ಎಂ ರಸ್ತೆಯ ಎರಡು ಬದಿಗಳಲ್ಲಿ ಮದ್ಯದ ಅಂಗಡಿಗಳು ಇವೆ ಎಂದರೆ ಸರಿ. ಸದರಿ ಅಂಗಡಿಗಳು ರಾತ್ರಿ 12.00 ಗಂಟೆಯ ಸಮಯದಲ್ಲಿ ತೆರೆದಿರುತ್ತವೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಹೆಚ್ಚಿನ ಜನಸಂದಣಿ ಇರುತ್ತದೆ ಎಂದರೆ ಸರಿ. ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿಲ್ಲ. ನಮ್ಮ ಡಾಬಾ ಅಂಗಡಿಯ ಅಕ್ಕಪಕ್ಕ ಮದ್ಯದ ಅಂಗಡಿಗಳು ಇವೆ ಎಂದರೆ ಗೊತ್ತಿಲ್ಲ. ಆರೋಪಿ ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ–3 ರ ದಾಖಲೆಯನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮು ಮಾ –1 ರಿಂದ 16 ರ ಟೆಟ್ರಾಪ್ಯಾಕ್ ಗಳ ಸಂಖ್ಯೆಯನ್ನು ನಿರ್ಧಿಷ್ಟವಾಗಿ ಹೇಳಲಾಗುವುದಿಲ್ಲ.

ಆರೋಪಿಯನ್ನು ನಾನು ಸ್ಥಳದಲ್ಲಿ ನೋಡಿಲ್ಲ ಮತ್ತು ಆರೋಪಿ ಸ್ಥಳದಲ್ಲಿ ಯಾವುದೇ ಮದ್ಯಾವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮು ಮಾ –1 ರಿಂದ 16 ರಂತಹ ಟೆಟ್ರಾಪ್ಯಾಕ್ ಗಳು ಎಲ್ಲಾ ಮದ್ಯದ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಠಾಣಾ ಅಂಕಿಅಂಶಗಳಿಗೋಸ್ಕರ ಆರೋಪಿಯನ್ನು ಠಾಣೆಗೆ ಕರೆಸಿ ಅವನ ವಿರುದ್ಧ ಸುಳ್ಳು ಪ್ರಕರಣ

ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮು ಮಾ ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**